**ಮೆ: ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ**

**ಮುಧೋಳ**

CC 91/2018.

CW-4/ PW-2

| | |
|---|---|
| ಹೆಸರು | ರಮೇಶ ಬಾಗಡಿ |
| ತಂದೆಯ ಹೆಸರು | ಯಮನಪ್ಪ |
| ವಯಸ್ಸು | 51 ವರ್ಷ |
| ಉದ್ಯೋಗ | ಹೋಟೆಲ ವ್ಯಾಪಾರ |
| ವಾಸಸ್ಥಳ | ಬರಗಿ ಗ್ರಾಮ. |

**ದಿನಾಂಕ: 04-07-2023 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ:- ಎ ಪಿ ಪಿ ರವರಿಂದ.**

ಪೋಲಿಸರು ನನ್ನ ಪಂಚರಾಗುವಂತೆ ಕೇಳಿಕೊಂಡಿಲ್ಲ, ನನ್ನ ಸಮಕ್ಷಮ ಯಾವುದೇ ಪಂಚಾನಾಮೆ ಜರುಗಿಸಿಲ್ಲ. ಪೋಲಿಸರು ಒಂದು ದಾಖಲೆಯ ಮೇಲೆ ಸಹಿ ಪಡೆದಿದ್ದಾರೆ.

ಈಗ ತೋರಿಸುತ್ತಿರುವ ಘಟನಾ ಸ್ಥಳ ಮತ್ತು ಜಪ್ತು ಪಂಚನಾಮೆಯಲ್ಲಿರುವ ತನ್ನ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಮಹಜರಗಳನ್ನು ಕ್ರಮವಾಗಿ ನಿಪಿ-3 ಮತ್ತು 4 ಎಂದು ಮತ್ತುಸಾಕ್ಷಿಯ ಸಹಿಗಳನ್ನು ನಿಪಿ-3(ಎ) ಮತ್ತು ನಿಪಿ-4(ಎ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಗಳಲ್ಲಿ ಏನು ಬರೆದಿದೆ ಗೊತ್ತಿಲ್ಲ.

ಈಗ ತೋರಿಸುತ್ತಿರುವ ಭಾವಚಿತ್ರಗಳಲ್ಲಿ ನಾನು ಇದ್ದೇನೆ . ಸದರಿ ಭಾವಚಿತ್ರಗಳನ್ನು ಎಲ್ಲಿ ಮತ್ತು ಯಾವ ಕಾರಣಕ್ಕೆ ತೆಗೆಯಲಾಗಿದೆ ಗೊತ್ತಿಲ್ಲ. ಸದರಿ ಭಾವಚಿತ್ರಗಳನ್ನು ನಿಪಿ-5 ಮತ್ತು ನಿಪಿ-6 ಎಂದು ಗುರುತಿಸಲಾಯಿತು.

ನನ್ನ ಸಮಕ್ಷಮ ಯಾವುದೇ ವಾಹನಗಳನ್ನು ಜಪ್ತುಮಾಡಿಕೊಂಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸ.ಸ.ಅ ರವರು ವಿನಂತಿಸಿದ್ದರಿಂದ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟಿ ಸವಾಲು- ಎ ಪಿ ಪಿ ರವರಿಂದ.**

ದಿನಾಂಕ 11.03.2017 ರಂದು ಮುಧೋಳ ಪೋಲಿಸರು ನನ್ನನ್ನು ಮತ್ತು ಚಾಸಾ-5 ರವರನ್ನು ಪಂಚರಾಗುವಂತೆ ಕರೆದಿದ್ದರು ಎಂದರೆ ಸರಿಯಲ್ಲ. ಮುಧೋಳ ಕಾತರಕಿ ರಸ್ತೆಯ ಬರಗಿ ಗ್ರಾಮದ ಶ್ರೀಕಾಂತ ಹುನಸಿಕಟ್ಟಿ ಇವರ ಜಮೀನಿನ ಹತ್ತಿರ ಅಪಘಾತವಾಗಿರುವ ವಿಷಯವನ್ನು ಚಾಸಾ-1 ರವರು ನಮಗೆ ತಿಳಿಸಿ ಘಟನಾ ಸ್ಥಳ ತೋರಿಸಿದರು ಎಂದರೆ ಸುಳ್ಳು.

ನಿಪಿ-3 ಮತ್ತು 4 ರಲ್ಲಿರುವ ವಿಷಯಗಳನ್ನು ತಿಳಿದುಕೊಂಡು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-3 ಮತ್ತು 4 ರ ಮಹಜರ ಕಾಲಕ್ಕೆ ನಾನು ಮತ್ತು ಚಾಸಾ-5 ರವರು ಹಾಜರಿದ್ದೇವು ಮತ್ತು ಅದರಲ್ಲಿರುವ ಅಂಶಗಳು ನನಗೆ ಗೊತ್ತು ಎಂದರೆ ಸರಿಯಲ್ಲ.

ನಿಪಿ-4 ರಂತೆ ನಮ್ಮಗಳ ಸವುಕ್ಷಮ ಮುಧೋಳ ಪೋಲಿಸ ಠಾಣೆಯ ಆವರಣದಲ್ಲಿ ಪಂಚನಾಮೆ ಜರುಗಿಸಿ ಅಪಘಾತಪಡಿಸಿದ ವಾಹನ KA 48 V-3976 ಕೆಂಪು ಬಣ್ಣದ HF Delux ಕಂಪನಿಯ ಮೋಟಾರ ಸೈಕಲನ್ನು ವಶಪಡಿಸಿಕೊಳ್ಳಲಾಯಿತು ಎಂದರೆ ಸುಳ್ಳು.

ನಾನು ಪಂಚನಾಮೆಯಲ್ಲಿರುವ ಎಲ್ಲಾ ವಿಷಯಗಳನ್ನು ತಿಳಿದುಕೊಂಡು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ನಿಪಿ-3 ಮತ್ತು 4 ರ ಮಹಜರ ಕಾಲಕ್ಕೆ ನಾನು ಮತ್ತು ಚಾಸಾ-5 ರವರು ಹಾಜರಿದ್ದೇವು ಮತ್ತು ಅದರಲ್ಲಿರುವ ಅಂಶಗಳು ನನಗೆ ಗೊತ್ತು ಎಂದರೆ ಸರಿಯಲ್ಲ.

ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ** ಆರೋಪಿ ಪರ ವಕೀಲರು ಪಾಟಿ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ ಮುಧೋಳ.

ಸಾಕ್ಷಿಯ ಸಹಿ